**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ– 188/2022**

ಪಿ.ಡಬ್ಲ್ಯೂಃ– 3
ಸಿ.ಡಬ್ಲ್ಯೂಃ– 3

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಯೋಗೀಶ್ ನಾಯ್ಕ |
| ತಂದೆಯ ಹೆಸರುಃ | : | ಶಂಕರ್ ನಾಯ್ಕ |
| ವಯಸ್ಸುಃ | : | 28 ವರ್ಷ |
| ವೃತ್ತಿಃ | : | ಖಾಸಗಿ ಕೆಲಸ |
| ವಾಸಃ | : | ಕುರ್ಲೆಹಳ್ಳಿ |

**ದಿನಾಂಕಃ 17–08–2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ–1 ನನ್ನ ದೊಡ್ಡಮ್ಮ. ಚಾಸಾ–2 ನನ್ನ ತಂಗಿ. ಚಾಸಾ–4 ನನ್ನ ತಂದೆ. ಚಾಸಾ–5 ನನ್ನ ದೊಡ್ಡಪ್ಪ. ಚಾಸಾ–6 ರಿಂದ 10ರವರು ಪರಿಚಯವಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿದೆ. ಆರೋಪಿತರೆಲ್ಲ ನಮ್ಮ ಗ್ರಾಮದವರು.

2. ದಿಃ 16.01.2022ರಂದು ನನ್ನ ಮಾವನಾದ ಚಾಸಾ–8 ಗಿರೀಶ್ ರವರು ಸಖರಾಯಪಟ್ಟಣದಲ್ಲಿರುವ ಚೌಡೇಶ್ವರಿ ದೇವಾಲಯದಲ್ಲಿ ಹರಕೆ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಸದರಿ ಕಾರ್ಯಕ್ರಮಕ್ಕೆ ನಾನು ಹಾಗೂ ನಮ್ಮ ಕುಟುಂಬದವರು ಹೋಗಿದ್ದೆವು. ನಂತರ ದೇವಸ್ಥಾನದ ಕಾರ್ಯಕ್ರಮವನ್ನು ಮುಗಿಸಿ ಮನೆಗೆ ವಾಪಸ್ಸು ಬಂದೆವು. ಆ ದಿನ ರಾತ್ರಿ 8.30ಗಂಟೆಗೆ ನಾನು ಮತ್ತು ನನ್ನ ದೊಡ್ಡಪ್ಪನ ಮಗ ಮೃತ ಶರತ್

ಹಾಗೂ ಚಾಸಾ-14ರವರು ನಮ್ಮ ಗ್ರಾಮದ ಬಸ್ ನಿಲ್ದಾಣದ ಬಳಿ ನಿಂತಿದ್ದೆವು. ಆ ಸಮಯದಲ್ಲಿ 2ನೇ ಆರೋಪಿ ನಟರಾಜ್ ನಾಯ್ಕ ಅಲ್ಲಿಗೆ ಬಂದು ನಮ್ಮನ್ನು ಏಕೆ ಕಾರ್ಯಕ್ರಮ ಕರೆಯಲಿಲ್ಲ ಎಂದು ಕೇಳಿದರು. ಅದಕ್ಕೆ ನಾವು ಅದು ನಮ್ಮ ಮನೆಯ ಕಾರ್ಯಕ್ರಮವಲ್ಲ ಎಂದು ಹೇಳಿ ನಮ್ಮನಮ್ಮ ಮನೆಗಳಿಗೆ ಹೋದೆವು. ಅದೇ ದಿನ ರಾತ್ರಿ 10.30ಗಂಟೆಗೆ ನಾವೆಲ್ಲರು ಮನೆಯ ಒಳಗೆ ಇದ್ದು ನನ್ನ ಅಣ್ಣ ಅಂದರೆ ದೊಡ್ಡಪ್ಪನ ಮಗ ಶರತ್ ಅವರ ಮನೆಯ ಆಚೆ ನಿಂತಿದ್ದನು. ಆ ಸಮಯದಲ್ಲಿ ಆರೋಪಿತರು ಎಲ್ಲರು ಕೈಗಳಲ್ಲಿ ದೊಣ್ಣೆಗಳನ್ನು ಹಿಡಿದುಕೊಂಡು ಬಂದು ಶರತ್ ಗೆ ನಮ್ಮನ್ನು ಏಕೆ ಕಾರ್ಯಕ್ರಮಕ್ಕೆ ಕರೆಯಲಿಲ್ಲ ಎಂದು ಪ್ರಶ್ನಿಸಿದರು. ಅದಕ್ಕೆ ಸದರಿ ಶರತ್ ಅದು ನಮ್ಮ ಮನೆಯ ಕಾರ್ಯಕ್ರಮವಲ್ಲ, ಬೇರೆಯವರು ಕಾರ್ಯಕ್ರಮ ನಾನು ಏಕೆ ಕರೆಯಬೇಕು ಎಂದು ಹೇಳಿದನು. ಅದಕ್ಕೆ ಆರೋಪಿತರು ನಮ್ಮನ್ನು ನೀನು ಕರೆದಿದ್ದರೆ ನಾವು ಕಾರ್ಯಕ್ರಮಕಾ್ಕೆ ಬರುತ್ತಿದ್ದೆವು ಎಂದು ಕೆಟ್ಟ-ಕೆಟ್ಟ ಪದಗಳಿಂದ ಬೈದು, ನಿನ್ನನ್ನು ಜೀವಸಹಿತ ಎಬಿಡುವುದಿಲ್ಲ ಕೊಲೆ ಮಾಡುತ್ತೇವೆ ಎಂದು ಹೇಳಿ, ನಂತರ 1ನೇ ಆರೋಪಿ ದನ್‌ಪಾಲ್ ನಾಯ್ಕ ದೊಣ್ಣೆಯಿಂದ ಶರತ್ ನ ತಲೆಗೆ ಹೊಡೆದು ರಕ್ತಗಾಯಪಡಿಸಿದೆನು. 3ನೇ ಆರೋಪಿ ಮಂಜಾನಾಯ್ಕ ದೊಣ್ಣೆಯಿಂದ ಶರತ್ ನ ಎಡಗೈಗೆ ಹೊಡೆದನು. 2ನೇ ಆರೋಪಿ ನಟರಾಜ್ ನಾಯ್ಕ ದೊಣ್ಣೆಯಿಂದ ಶರತ್ ನ ಕಾಲುಗಳ ಮೇಲೆ ಹಲೆ ಮಾಡಿದನು. ನಂತರ ನಾನು, ಚಾಸಾ-1 ಮತ್ತು 2ರವರು ಜಗಳ ಬಿಡಿಸಲು ಹೋದಾಗ 3ನೇ ಆರೋಪಿ ಮಂಜಾನಾಯ್ಕ ಚಾಸಾ-1 ಮತ್ತು 2ರವರಿಗೆ ಎಡಗಾಲು ಹಾಗೂ ಸೊಂಟಕ್ಕೆ ದೊಣ್ಣೆಯಿಂದ ಹಲ್ಲೆ ಮಾಡಿದನು. 4 ಮತ್ತು 5ನೇ ಆರೋಪಿತರು ಚಾಸಾ-2ರವರ ಬಲಕುತ್ತಿಗೆಯ ಮೇಲೆ ದೊಣ್ಣೆಯಿಂದ ಹಲ್ಲೆ ಮಾಡಿದರು. 2ನೇ ಆರೋಪಿ ದೊಣ್ಣೆಯಿಂದ

ನನ್ನ ತಲೆಗೆ ಹಾಗೂ ಎಡಗೈಗೆ ದೊಣ್ಣೆಯಿಂದ ಹಲ್ಲೆ ಮಾಡಿದನು. ನಂತರ ನನ್ನ ತಂದೆ ಚಾಸಾ-4, 5 ರಿಂದ 10ರವರು ಬಂದು ನಮ್ಮನ್ನು ಆರೋಪಿತರಿಂದ ಬಿಡಿಸಿಕೊಂಡು ಆರೋಪಿಗಳಿಗೆ ಸಮಾಧಾನಪಡಿಸಿದರು. ಆ ಸಮಯದಲ್ಲಿ ಶರತ್ ಗೆ ಗಾಂಭೀರ ಸ್ವರೂಪದ ಏಟಾಗಿತ್ತು. ಆತನನ್ನು ಅರಸೀಕೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿಂದ ವೈದ್ಯರು ಆತನನ್ನು ಪರೀಕ್ಷಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಹಾಸನದ ಸರ್ಕಾರಿ ಆಸ್ಪತೆಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು ಕೂಡಲೇ ಮೃತ ಶರತ್ ನನ್ನು ಆಂಬುಲೆನ್ಸ್ ನಲ್ಲಿ ಹಾಸನದ ಸರ್ಕಾರಿ ಆಸ್ಪತೆಗೆ ಕರೆದುಕೊಂಡು ಬಂದು ಚಿಕಿತ್ಸೆಗಾಗಿ ಸೇರಿಸಿದೆವು. ಆದರೆ ಹಾಸನದ ವೈದ್ಯರು ಆತನ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ನಿಮಾನ್ಸ್ ಕರೆದುಕೊಂಡು ಹೋಗುವಂತೆ ಸೂಚಿಸಿದ ಮೇರೆಗೆ ಕೂಡಲೇ ಆತನನ್ನು ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಆದರೆ ಸದರಿ ನಿಮಾನ್ಸ್ ಆಸ್ಪತ್ರೆಯಲ್ಲಿ ಬೆಡ್ ಹಾಗೂ ವೆಂಟಿಲೇಟರ್ ಈಗ ಲಭ್ಯವಿಲ್ಲ ಎಂದು ಹೇಳಿದ ಕಾರಣ ಆತನನ್ನು ಬೆಂಗಳೂರಿನ ಕಣ್ವ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಹೋದೆವು. ಅಲ್ಲಿನ ವೈದ್ಯರು ಆತನಿಗೆ ಚಿಕಿತ್ಸೆಯನ್ನು ನೀಡಿ ಆಗುವುದಿಲ್ಲ, ವಾಪಸ್ಸು ನಿಮ್ಮ ಗ್ರಾಮಕ್ಕೆ ಕರೆದುಕೊಂಡು ಹೋಗಿ ಎಂದು ಹೇಳಿದ್ದು ಸದರಿ ಶರತ್ ನನ್ನು ವಾಪಸ್ಸು ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬರುವಾಗ ನೆಲಮಂಗಲ ಟೋಲ್ ಬಳಿ ಸಂಜೆ 7 ಗಂಟೆಗೆ ಮೃತಪಟ್ಟಿರುತ್ತಾನೆ. ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

3. ಘಟನೆಯಲ್ಲಿ ಸದರಿ ಆರೋಪಿತರ ಹಲ್ಲೆಯಿಂದ ನನ್ನ ತಲೆಗೆ ಹಾಗೂ ಎಡಗೈಗೆ ಭಾರಿ ಸ್ವರೂಪದ ಗಾಯಗಳಾಗಿದ್ದವು. ನಾನು ಅರಸಿಕೆರೆ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಮೃತ ಶರತ್ ಗೆ ಸಂಬಂಧಿಸಿದ 4

ಪೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.5 ರಿಂದ 8ಕ್ಕೆ ಗುರುತಿಸಲಾಗಿದೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮೂರು ದೊಣ್ಣೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ-1 ರಿಂದ 3ಕ್ಕೆ ಗುರುತಿಸಲಾಗಿದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿತರ ಪರ ವಕೀಲರಿಂದ:**

ಪಾಟೀ ಸವಾಲು ಮಾಡಲು ಆರೋಪಿತರ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.